# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಂ.ಸ.ಕಾ.ನಿ.ಅ./ಕೋ.ಉ.ವಿ/ಪಿ.ಆರ್/08/2022-23

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ,
ಕೋರಮಂಗಲ ಉಪವಿಭಾಗ,
ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ,
5ನೇ ಬ್ಲಾಕ್, ಕೋರಮಂಗಲ,
ಬೆಂಗಳೂರು, ದಿನಾಂಕ: 22-08-2022

**-: ಸಭೆ ತಿಳುವಳಿಕೆ ಪತ್ರ :-**

**ವಿಷಯ :-** ಆಡುಗೋಡಿ ವಾರ್ಡ್ ಸಂಖ್ಯೆ.147ರ ವಾರ್ಡ್ ಮಟ್ಟದ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿರುವ ಬಗ್ಗೆ.

**ಉಲ್ಲೇಖ:-** ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಚೇರಿ ಆದೇಶದ ಪತ್ರ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ:21-09-2020.

* * * * *

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶದ ರೀತ್ಯಾ ವಾರ್ಡ್ ಸಂಖ್ಯೆ.147(ಆಡುಗೋಡಿ) ವಾರ್ಡ್ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ದಿನಾಂಕ:**24.08.2022** ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸಭೆಯು **ಬಿ.ಬಿ.ಎಂ.ಪಿ. ವಾಣಿಜ್ಯ ಸಂಕೀರ್ಣ, ಆಡುಗೋಡಿ, ಹೊಸೂರು ರಸ್ತೆ (ಕಾರ್ಯಪಾಲಕ ಅಭಿಯಂತರರ ಕಛೇರಿ)** ಇಲ್ಲಿ ಜರುಗಲಿದ್ದು, ಸದರಿ ಸಭೆಗೆ ವಾರ್ಡ್ ಸಮಿತಿ ಸದಸ್ಯರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಲು ಕೋರಿದೆ ಹಾಗೂ ಸಭೆಗೆ ಗೈರು ಹಾಜರಾಗುವ ಅಧಿಕಾರಿಗಳ ಹೆಸರನ್ನು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು.

**ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳು:** 1) ಕೋವಿಡ್-19ರ ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ. 2) ಒಂಟಿಮನೆ ನಿರ್ಮಾಣದ ಫಲಾನುಭವಿಗಳ ಆಯ್ಕೆಯ ಬಗ್ಗೆ 3) ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ. 4) ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ. 5) ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ. 6) ಬೀದಿ ದೀಪಗಳ ನಿರ್ವಹಣೆ ಬಗ್ಗೆ. 7) ವಿದ್ಯುತ್ ಸರಬರಾಜು (ಬೆಸ್ಕಾಂ)ಗೆ ಸಂಬಂಧಿಸಿದ ವಿಷಯದ ಬಗ್ಗೆ ಹಾಗೂ ಇನ್ನಿತರೆ ವಿಷಯಗಳು ಅಧ್ಯಕ್ಷರ ಸೂಚನೆಯಂತೆ.

ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ 147, ಆಡುಗೋಡಿ

ರವರಿಗೆ,
ಸಂಬಂಧಪಟ್ಟ ಸದಸ್ಯರುಗಳು/ಅಧಿಕಾರಿಗಳು
ವಾರ್ಡ್ ವ್ಯಾಪ್ತಿಯ ಬಡಾವಣೆಗಳ ನಿವಾಸಿಗಳಿಗೆ

ಪ್ರತಿಯನ್ನು:-

1. ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಅಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್), ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
3. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್), ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಂದಾಯ ಅಧಿಕಾರಿಗಳು, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಬಿ.ಟಿ.ಎಂ.ಲೇಔಟ್ ವಿಭಾಗ, ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
8. ಪೊಲೀಸ್ ಇನ್ಸ್‌ಪೆಕ್ಟರ್ (ಟ್ರಾಫಿಕ್), ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿ.ಬಿ.ಎಂ.ಪಿ (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ನಿರ್ದೇಶಕರು, ತೋಟಗಾರಿಕೆ, ಬಿ.ಬಿ.ಎಂ.ಪಿ. (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) (ರಸ್ತೆ ದೀಪಗಳು) ದಕ್ಷಿಣ ವಲಯ, ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.

Scanned by CamScanner

Ward Committee Meeting Ward - 147, Adugodi

Date: 24/08/2022.
Day: Wednesday.



| Sl. No | Name | Designation | Signature |
|---|---|---|---|
| 01. | Dr. Dhanya Kumar [Nodal Officer] | Chairman. | |
| 02. | Smt. Manjula [Ex. corp] | Member | |
| 03. | Sri. Sampath [Ex. corp] | Member. | |
| 04. | Sri A. M. Thyagaraj | Member. | |
| 05. | Smt. V. Hemavathi | Member | |
| 06. | Smt. Rathnamma | Member | [signature] |
| 07. | Smt. Bhagya Lakshmi | Member | |
| 08. | Sri M. Gopal | Member | [signature] |
| 09. | Sri. B. D. Nagaraj | Member | [signature] |
| 10. | Sri. Porapandiyan | Member | [signature] |
| 11. | Sri Kemparaju | Member | [signature] |
| 12. | Chandrashekar [Ward-147] | Member | [signature] |



| Sl. No | Name | Designation | Signature |
|---|---|---|---|
| 1 | DURGA PRASAD T.K. | JHI - 147 | [signature] |
| 2 | Narendra Babu & Team | Forest BBMP | [signature] |
| 3 | Kalpana. V | SJHI W-147 | [signature] |
| 4 | Basavaraju H.S. | RI. W - 147 | [signature] |
| 5 | Dr. PRAMOD. N | AMO ADUGODI UPHC | [signature] |
| 6 | N. Rohit | AEE(E) BESCOM | [signature] |
| 7 | Gajanan Akkimarudi | JE (BWSSB) | [signature] |

Scanned by CamScanner



Scanned by CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಕೋರಮಂಗಲ ಉಪ-ವಿಭಾಗದ, ಆಡುಗೋಡಿ ವಾರ್ಡ್ ಸಂಖ್ಯೆ-147
## ದಿನಾಂಕ:24-08-2022 ರಂದು ಆಗಸ್ಟ್-2022 ರ ಮಾಹೆಯ
## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಸಿದ್ದಪ್ಪಾಜಿ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147ರ ರವರ ಮೌಖಿಕ ಆದೇಶದ ಮೇರೆಗೆ ಶ್ರೀ ಪಿ. ಚಂದ್ರಶೇಖರ್, ಕಾರ್ಯದರ್ಶಿ, ವಾರ್ಡ್ ಸಂಖ್ಯೆ 147ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ವಾಣಿಜ್ಯ ಸಂಕೀರ್ಣ, (ಕಾರ್ಯಪಾಲಕ ಅಭಿಯಂತರರ ಕಛೇರಿ) ಆಡುಗೋಡಿಯಲ್ಲಿ ದಿನಾಂಕ:24.08.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:-**

1. ಶ್ರೀಮತಿ ರತ್ನಮ್ಮ
2. ಶ್ರೀ ಎಂ. ಗೋಪಾಲ್
3. ಶ್ರೀ ಬಿ.ಡಿ. ನಾಗರಾಜ್
4. ಶ್ರೀ ಪೋರಪಾಂಡಿಯನ್
5. ಶ್ರೀ ಕೆಂಪರಾಜು

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಚಂದ್ರಶೇಖರ್ .ಪಿ, ಕಾರ್ಯದರ್ಶಿ, ವಾರ್ಡ್ ಸಮಿತಿ ವಾರ್ಡ್-147, ಆಡುಗೋಡಿ
2. ಶ್ರೀ ನರೇಂದ್ರ ಬಾಬು, ಡಿ.ಆರ್.ಎಫ್.ಓ. ಅರಣ್ಯ ಇಲಾಖೆ, ಬಿ.ಬಿ.ಎಂ.ಪಿ.
3. ಶ್ರೀ ದುರ್ಗಾ ಪ್ರಸಾದ್, ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ.
4. ಶ್ರೀಮತಿ ಕಲ್ಪನಾ .ವಿ, ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ.
5. ಶ್ರೀ ಬಸವರಾಜು ಹೆಚ್.ಎಸ್., ಕಂದಾಯ ನಿರೀಕ್ಷಕರು, ವಾರ್ಡ್-147
6. ಡಾ॥ ಪ್ರಮೋದ್ .ಎನ್. ಆರೋಗ್ಯ ವೈದ್ಯಾಧಿಕಾರಿಗಳು, ಆಡುಗೋಡಿ
7. ಶ್ರೀ ಎನ್. ರೋಹಿತ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ
8. ಶ್ರೀ ಗಜಾನನ ಅಕ್ಕಿಮರಡಿ, ಕಿರಿಯ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.

* * * * *

ಶ್ರೀ ಪಿ. ಚಂದ್ರಶೇಖರ್, ಕಾರ್ಯದರ್ಶಿ, ವಾರ್ಡ್ ಸಂಖ್ಯೆ 147 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳಿಗೆ ಹಾಗೂ ವಾರ್ಡ್‌ನ ಅಧಿಕಾರಿಗಳಿಗೆ ಸಭೆಗೆ ಸ್ವಾಗತಿಸಿ, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು ಮತ್ತು ಅಭಿವೃದ್ಧಿ ಕಾಮಗಾರಿಗಳ ಹಾಗೂ ಕೋವಿಡ್ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಲು ಸೂಚಿಸಿದರು.

ಶ್ರೀಮತಿ ರತ್ನಮ್ಮ ಮತ್ತು ಶ್ರೀ ಬಿ.ಡಿ. ನಾಗರಾಜ್ ರವರು ಮಾತನಾಡಿ, ಆಡುಗೋಡಿ ವ್ಯಾಪ್ತಿಯಲ್ಲಿರುವ ಮರದ ಕೊಂಬೆಗಳು ಒಣಗಿದ್ದು, ಬೀಳುವ ಹಂತದಲ್ಲಿರುವ ಹಾಗೂ ಒಣಗಿರುವ ರೆಂಬೆ-ಕೊಂಬೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಮುಂದಾಗುವ ಅಪಾಯವನ್ನು ತಪ್ಪಿಸಲು ಮರದ ಕೊಂಬೆಗಳನ್ನು ಕತ್ತರಿಸಬೇಕೆಂದು ಸಭೆಯಲ್ಲಿ ತಿಳಿಸಿದರು.



Scanned by CamScanner

ಶ್ರೀಮತಿ ರತ್ನಮ್ಮ ರವರು ಮಾತನಾಡಿ, ಲಾರೆನ್ಸ್ ಸ್ಕೂಲ್ ಹಿಂಭಾಗದ ರಸ್ತೆಯಲ್ಲಿ ಒಣಗಿರುವ ಮರವಿದ್ದು, ಅದನ್ನು ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು.

ಶ್ರೀ ಬಿ.ಡಿ. ನಾಗರಾಜು ರವರು ಮಾತನಾಡಿ, ಬೃಹದಾಕಾರವಾಗಿ ಬೆಳೆದಿರುವಂತಹ ಒಣಗಿರುವ ಮರ ಹಾಗೂ ಕೊಂಬೆಗಳನ್ನು ಕತ್ತರಿಸಲು ಬಿ.ಟಿ.ಎಂ. ಲೇಔಟ್ ವಿಧಾನಸಭಾ ಕ್ಷೇತ್ರಕ್ಕೆ ಒಂದು ಕ್ರೇನ್ ಅವಶ್ಯಕತೆ ಇರುವುದರಿಂದ ಕ್ರೇನ್ ಅನ್ನು ಖರೀದಿಸಲು ಮಾನ್ಯ ಆಯುಕ್ತರು ರವರಿಗೆ ಪತ್ರ ಬರೆಯುವಂತೆ ಸಲಹೆಯನ್ನು ಸಭೆಯಲ್ಲಿ ತಿಳಿಸಿದರು.

ಶ್ರೀ ಕೆಂಪರಾಜು ರವರು ಮಾತನಾಡಿ, 7ನೇ ಬ್ಲಾಕ್ ಕೋರಮಂಗಲ, 1ನೇ 'ಸಿ' ಮುಖ್ಯರಸ್ತೆಯಲ್ಲಿರುವ ಮರದಲ್ಲಿನ ಕೊಂಬೆಗಳು ಒಣಗಿದ್ದು, ಅವುಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಿದರು.

ಶ್ರೀ ಗೋಪಾಲ್ ರವರು ಮಾತನಾಡಿ, ಆಂಜನೇಯ ದೇವಸ್ಥಾನದ ರಸ್ತೆ, 6ನೇ ಅಡ್ಡರಸ್ತೆ ದೇವೇಗೌಡ ಲೇಔಟ್, 1ನೇ ಮುಖ್ಯರಸ್ತೆ ಬಾಳಪ್ಪ ಲೇಔಟ್ ಇಲ್ಲಿರುವ ರಸ್ತೆ ದೀಪದ ಕಂಬಗಳು ಬಾಗಿರುತ್ತವೆ. ಆದುದರಿಂದ ವಿದ್ಯುತ ಕಂಬಗಳನ್ನು ಸರಿಪಡಿಸಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ಪಾಂಡಿಯನ್ ರವರು ಮಾತನಾಡಿ, ರಾಜೇಂದ್ರ ನಗರದಲ್ಲಿನ 7ನೇ ಮುಖ್ಯರಸ್ತೆ, 1ನೇ ಮುಖ್ಯರಸ್ತೆ,ದ 12ನೇ ಅಡ್ಡರಸ್ತೆ, ಕರುಮಾರಿಯಮ್ಮ ದೇವಸ್ಥಾನದರ ಹತ್ತಿರ, 9ನೇ ಮುಖ್ಯರಸ್ತೆ, 8ನೇ ಮುಖ್ಯರಸ್ತೆಗಳಲ್ಲಿ ಸುಮಾರು 12 ವಿದ್ಯುತ್ ಕಂಬಗಳು ಬಾಗಿರುತ್ತವೆ. ಆದುದರಿಂದ ಇದರ ಬಗ್ಗೆ ಕ್ರಮವಹಿಸಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ಪಾಂಡಿಯನ್ ರವರು ಮಾತನಾಡಿ, ರಾಜೇಂದ್ರನಗರ ವ್ಯಾಪ್ತಿಯಲ್ಲಿರುವ ವಸತಿ ಮನೆಗಳಿಗೆ ವಿದ್ಯುತ್ ಬಳಕೆಯ ಶುಲ್ಕದ ಮೊತ್ತವು ಪ್ರತಿ ಮಾಹೆಯು ಹೆಚ್ಚಾಗಿರುತ್ತದೆ. ಆದುದರಿಂದ ಆದುದರಿಂದ ವಿದ್ಯುತ್ ಇಲಾಖೆ ಸಿಬ್ಬಂಧಿಗಳು ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ಬಿ.ಡಿ. ನಾಗರಾಜು ರವರು ಮಾತನಾಡಿ, 8ನೇ ಬ್ಲಾಕ್ ಕೋರಮಂಗಲ, ಶಿವ ಥಿಯೇಟರ್ ಮತ್ತು ಕಾರ್ಪೋರೇಷನ್ ಬ್ಯಾಂಕ್ ಹತ್ತಿರ ವಿದ್ಯುತ್ ಏರಿಳಿತ (Fluctuation) ಉಂಟಾಗುತ್ತಿರುತ್ತದೆ. ಆದುದರಿಂದ ವಿದ್ಯುತ್ ಇಲಾಖೆ ಸಿಬ್ಬಂಧಿಗಳು ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ಬಿ.ಡಿ. ನಾಗರಾಜು ರವರು ಮಾತನಾಡಿ, ಆಡುಗೋಡಿಯ ವ್ಯಾಪ್ತಿಯಲ್ಲಿ ಅಡ್ಡರಸ್ತೆಗಳಲ್ಲಿನ ರಸ್ತೆ ಚರಂಡಿಗಳಲ್ಲಿರುವ ಹೂಳುಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು.

ಶ್ರೀ ಕೆಂಪರಾಜು ರವರು ಮಾತನಾಡಿ, 7ನೇ ಬ್ಲಾಕ್ ಕೋರಮಂಗಲ 1ನೇ ಮುಖ್ಯರಸ್ತೆಯಲ್ಲಿ ರಸ್ತೆ ವಿಭಜಕವು ಹಾನಿಗೊಂಡಿದ್ದು, ಇದನ್ನು ಸರಿಪಡಿಸುವಂತೆ ಹಾಗೂ Caution Pole ಅಳವಡಿಸುವಂತೆ ಸಭೆಯಲ್ಲಿ ಕೋರಿದರು.

ಶ್ರೀ ಕೆಂಪರಾಜು ರವರು ಮಾತನಾಡಿ, 7ನೇ ಬ್ಲಾಕ್ ಕೋರಮಂಗಲ 1ನೇ ಮುಖ್ಯರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಿರುತ್ತಾರೆ. ಸದರಿ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಅಗೆದಿರುವ ಸ್ಥಳವನ್ನು ಡಾಂಬರು ಹಾಕಿ ರಸ್ತೆಯನ್ನು ಸರಿಪಡಿಸಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ಪಾಂಡಿಯನ್ ರವರು ಮಾತನಾಡಿ, ರಾಜೇಂದ್ರನಗರ ವ್ಯಾಪ್ತಿಯಲ್ಲಿ ಮುಖ್ಯ ರಸ್ತೆಗಳಲ್ಲಿ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸುವಂತೆ ಸಭೆಯಲ್ಲಿ ತಿಳಿಸಿದರು.



Scanned by CamScanner

ಶ್ರೀ ಬಿ.ಡಿ. ನಾಗರಾಜು ರವರು ಮಾತನಾಡಿ, ವಾರ್ಡ್‌ನಲ್ಲಿ ಪೌರಕಾರ್ಮಿಕರ ಸಂಖ್ಯೆ ಕಡಿಮೆಯಾಗಿರುತ್ತದೆ. ಆದುದರಿಂದ ಪೌರಕಾರ್ಮಿಕರನ್ನು ನೇಮಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀ ಕೆಂಪರಾಜು ರವರು ಮಾತನಾಡಿ, ಏರ್‌ಟೆಲ್ ಆಫೀಸ್ ಮುಂಭಾಗ, ಪಾರ್ಕ್ ಹತ್ತಿರ ಬೋರ್‌ವೆಲ್ ನಿರ್ವಹಣೆ ಮಾಡಿಕೊಡಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ಪಾಂಡಿಯನ್ ರವರು ಮಾತನಾಡಿ, ಬ್ಲಾಕ್‌ಸ್ಪಾಟ್‌ಗಳಲ್ಲಿ ತ್ಯಾಜ್ಯವನ್ನು ತೆರವುಗೊಳಿಸಿದ ನಂತರ ಆ ಸ್ಥಳಗಳಿಂದ ದುರ್ವಾಸನೆ ಬರುವ ಕಾರಣ ಬ್ಲೀಚಿಂಗ್ ಪೌಡರ್ ಅಥವಾ ಡಿ.ಡಿ.ಟಿ. ಪೌಡರ್‌ಗಳನ್ನು ಹಾಕಬೇಕೆಂದು ಸಭೆಯಲ್ಲಿ ಕೋರಿದರು.

ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಚಂದ್ರಶೇಖರ್ .ಪಿ)
ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್–147 ಆಡುಗೋಡಿ ವಿಭಾಗ

(ಶ್ರೀ ಸಿದ್ದಪ್ಪಾಜಿ)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್–147, ಆಡುಗೋಡಿ



Scanned by CamScanner